# Vice President of India visited the UAE to convey condolences on passing away of HH Sheikh Khalifa bin Zayed Al Nahyan

May 15, 2022

---

## ಹೆಚ್ ಹೆಚ್ ಶೇಖ್ ಖಲೀಫಾ ಬಿನ್ ಜಾಯೆದ್ ಅಲ್ ನಹ್ಯಾನ್ ಅವರ ನಿಧನಕ್ಕೆ ಸಂತಾಪ ಸೂಚಿಸಲು ಯುಎಇಗೆ ಉಪರಾಷ್ಟ್ರಪತಿಯವರ ಭೇಟಿ

ಮೇ 15, 2022

ಉಪರಾಷ್ಟ್ರಪತಿ ಗೌರವಾನ್ವಿತ ಶ್ರೀ ಎಂ ವೆಂಕಯ್ಯ ನಾಯ್ಡು ಅವರು 15 ಮೇ 2022 ರಂದು, ಯುಎಇಯ ಮಾಜಿ ಅಧ್ಯಕ್ಷ ಮತ್ತು ಅಬು ಆಡಳಿತಗಾರರಾದ ಗೌರವಾನ್ವಿತ ಶ್ರೀಮನ್ ಶೇಖ್ ಖಲೀಫಾ ಬಿನ್ ಜಾಯೆದ್ ಅಲ್ ನಹ್ಯಾನ್ ಅವರ ನಿಧನಕ್ಕೆ ಭಾರತ ಸರ್ಕಾರದ ಪರವಾಗಿ ಯುಎಇ ನಾಯಕತ್ವಕ್ಕೆ ಸಂತಾಪ ಸೂಚಿಸಲು ಯುಎಇಗೆ ಭೇಟಿ ನೀಡಿದರು.

ಇಂದು ಮಧ್ಯಾಹ್ನ ಅಬುಧಾಬಿಗೆ ಬಂದಿಳಿದ ಉಪರಾಷ್ಟ್ರಪತಿಗಳು ನೇರವಾಗಿ ಮುಶ್ರಿಫ್ ಅರಮನೆಗೆ ಭೇಟಿನೀಡಿ ಯುನೈಟೆಡ್ ಅರಬ್ ಎಮಿರೇಟ್ಸ್‌ನ ಹೊಸದಾಗಿ ಚುನಾಯಿತ ಅಧ್ಯಕ್ಷರು, ರಾಜಮನೆತನ ಮತ್ತು ಯುಎಇಯ ಸಂಪೂರ್ಣ ನಾಯಕತ್ವದ ಗೌರವಾನ್ವಿತ ಶ್ರೀಮನ್ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ರವರಿಗೆ ಸಂತಾಪ ಸೂಚಿಸಿದರು.

ರಾಷ್ಟ್ರಪತಿ ಶ್ರೀ ರಾಮ್ ನಾಥ್ ಕೋವಿಂದ್ ಮತ್ತು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ಸಂತಾಪವನ್ನು ತಿಳಿಸಿದ ಉಪರಾಷ್ಟ್ರಪತಿಯವರು ಈ ಕಷ್ಟದ ಸಮಯದಲ್ಲಿ ಭಾರತ ಮತ್ತು ಅದರ ಜನರು ಯುಎಇ ಪರವಾಗಿ ನಿಂತಿದ್ದಾರೆ ಎಂದು ಪುನರುಚ್ಚರಿಸಿದರು.

ಗೌರವಾನ್ವಿತ ಶ್ರೀಮನ್ ಶೇಖ್ ಖಲೀಫಾ ಬಿನ್ ಝಾಯೆದ್ ಅಲ್ ನಹ್ಯಾನ್ ಅವರ ನೇತೃತ್ವದಲ್ಲಿ ಭಾರತ-ಯುಎಇ ಸಂಬಂಧಗಳು ಉಭಯ ದೇಶಗಳ ಜನರ ಪರಸ್ಪರ ಪ್ರಯೋಜನಕ್ಕಾಗಿ ಹೆಚ್ಚು ಅಭಿವೃದ್ಧಿ ಹೊಂದಿದ್ದವು ಮತ್ತು ಶೇಖ್ ಖಲೀಫಾ ಅವರು ಯುಎಇಯಲ್ಲಿರುವ ದೊಡ್ಡ ಭಾರತೀಯ ಸಮುದಾಯದ ಬಗ್ಗೆ ಅಸಾಧಾರಣ ಕಾಳಜಿ ವಹಿಸಿದ್ದರು, ಅವರನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದರು ಎಂದು ಉಪರಾಷ್ಟ್ರಪತಿಯವರು ಪ್ರೀತಿಯಿಂದ ನೆನಪಿಸಿಕೊಂಡರು.

ಇದಕ್ಕೂ ಮುನ್ನ, ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಅವರು ಭಾರತದ ಸಂತಾಪವನ್ನು ತಿಳಿಸಲು 14 ಮೇ 2022 ರಂದು ನವದೆಹಲಿಯಲ್ಲಿರುವ ಯುಎಇ ರಾಯಭಾರ ಕಚೇರಿಗೆ ಭೇಟಿ ನೀಡಿದ್ದರು. ಭಾರತವು 14 ಮೇ 2022 ರಂದು ರಾಷ್ಟ್ರೀಯ ಶೋಕಾಚರಣೆಯ ದಿನವನ್ನು ಆಚರಿಸಿದೆ.

ಯುಎಇಯ ಮೂರನೇ ಅಧ್ಯಕ್ಷರಾಗಿ ಆಯ್ಕೆಯಾದ ಗೌರವಾನ್ವಿತ ಶ್ರೀಮನ್ ಶೇಖ್ ಮೊಹಮ್ಮದ್ ಅವರಿಗೆ ಉಪರಾಷ್ಟ್ರಪತಿಯವರು ತಮ್ಮ ಶುಭಾಶಯಗಳನ್ನು ತಿಳಿಸಿದರು. ಅವರ ಕಾಳಜಿ ಮತ್ತು ನಾಯಕತ್ವದಲ್ಲಿ ಉಭಯ ದೇಶಗಳು ಹೊಸ ಮತ್ತು ವೈವಿಧ್ಯಮಯ ಕ್ಷೇತ್ರಗಳಲ್ಲಿ ತಮ್ಮ ಐತಿಹಾಸಿಕ ಮತ್ತು ಸಮಗ್ರ ಕಾರ್ಯತಂತ್ರದ ಸಂಬಂಧವನ್ನು

ಮುಂದುವರೆಸಿಕೊಂಡು ಹೋಗುವುದೆಂದು ಉಪರಾಷ್ಟ್ರಪತಿಯವರು ಹೇಳಿದರು.

ಉಪರಾಷ್ಟ್ರಪತಿಯವರೊಂದಿಗೆ ಯುಎಇಗೆ ಭಾರತದ ರಾಯಭಾರಿ, ಉಪರಾಷ್ಟ್ರಪತಿಯ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ (ಗಲ್ಫ್) ಮತ್ತು ಭಾರತ ಸರ್ಕಾರದ ಇತರ ಹಿರಿಯ ಅಧಿಕಾರಿಗಳು ಜೊತೆಯಲ್ಲಿ ಭೇಟಿ ನೀಡಿದರು.

**ಅಬುಧಾಬಿ**
**ಮೇ 15, 2022**

DISCLAIMER: This is an approximate translation. The original is available in English on MEA's website and may be referred to as the official press release.